# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 138 | Pages. 2 | Date: 03-04-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 138 - ಪುಟಗಳು : 2 - 03 ಏಪ್ರಿಲ್ 2025 ಗುರುವಾರ Ph: 8762954248 ದರ : ₹1


# ಹಾಲಿನ ದರ ಏರಿಕೆಯಿಂದ ಮಾಸಿಕ 9 ಕೋಟಿ ರೂ. ನಷ್ಟ

## ಆರ್ಥಿಕ ಸ್ಥಿತಿಗೆ ಹೊಡೆತ ರಾಜ್ಯ ಸರ್ಕಾರದ ನಡೆಗೆ ರೇವಣ್ಣ ಆಕ್ರೋಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯ ಸರ್ಕಾರದ ಆದೇಶದಂತೆ ಏ. 1 ರಿಂದ ಉತ್ಪಾದಕರಿಂದ ಹಾಲು ಖರೀದಿ ದರವನ್ನು ಪ್ರತಿ ಲೀಟರ್‌ಗೆ 4 ರೂಪಾಯಿ ಹೆಚ್ಚಿಸಲಾಗಿದೆ. ಆದರೆ ಈ ನಿರ್ಧಾರದಿಂದ ಹಾಮೂಲ್, ಮಾರಾಟವಾಗದ ಹಾಲಿಗೂ ನೀಡುವ ಬಟವಾಡೆಯಿಂದ ಮಾಸಿಕ 9 ಕೋಟಿ ರೂಪಾಯಿ ನಷ್ಟ ಅನುಭವಿಸುವ ಆತಂಕ ಎದುರಾಗಿದೆ ಎಂದು ಮಾಜಿ ಸಚಿವ ಎಚ್.ಡಿ. ರೇವಣ್ಣ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ಮುಖ್ಯಮಂತ್ರಿ, ಸರ್ಕಾರದ ಕಾರ್ಯದರ್ಶಿ ಹಾಗೂ ಕೆಎಂಎಫ್‌ಗೆ ಎರಡು ಬಾರಿ ಪತ್ರ ಬರೆದು ಆತಂಕ ವ್ಯಕ್ತಪಡಿಸಿದ್ದೇನೆ ಎಂದರು.

ಹಾಸನ ಹಾಲು ಒಕ್ಕೂಟಕದಲ್ಲಿ ಪ್ರತಿದಿನ 12.58 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಇದರಲ್ಲಿ 1.98 ಲಕ್ಷ ಲೀಟರ್ ಹಾಲು ಹಾಗೂ 1. 20 ಲಕ್ಷ ಲೀಟರ್ ಮೊಸರು ಮಾರಾಟ ಮಾಡಲಾಗುತ್ತಿದೆ. ಒಟ್ಟಾರೆ 3.18 ಲಕ್ಷ ಲೀಟರ್ ಉತ್ಪನ್ನಗಳು ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮಾರಾಟವಾಗುತ್ತಿವೆ. ಆದರೆ ಉಳಿದ 9.40 ಲಕ್ಷ ಲೀಟರ್ ಹಾಲು ಮಾರಾಟವಾಗದೇ ಉಳಿಯುತ್ತಿದೆ. ಇನ್ನೊಂದು ತಿಂಗಳಲ್ಲಿ 2.5 ಲಕ್ಷ ಲೀಟರ್ ಹಾಲು ಹೆಚ್ಚಾಗುವ ಸಾಧ್ಯತೆ ಇದೆ ಎಂದು ರೇವಣ್ಣ ಹೇಳಿದರು.



### ಸರ್ಕಾರದ ಒತ್ತಡ

ಮುಖ್ಯಮಂತ್ರಿಗಳ ಆದೇಶಕ್ಕೆ ಗೌರವ ನೀಡಿ ಏ. 1 ರಿಂದ ಹಾಲು ಖರೀದಿ ದರ ಹೆಚ್ಚಳ ಮಾಡಲಾಗಿದೆ. ಪ್ರಸ್ತುತ ಒಕ್ಕೂಟದ ಬಳಿ 5.5 ರಿಂದ 6 ಕೋಟಿ ರೂಪಾಯಿ ಲಾಭದ ಹಣ ಇದೆ. ಆ ಹಣ ಮುಗಿಯುವವರೆಗೆ ಖರೀದಿ ದರ ಹೆಚ್ಚಳವನ್ನು ಮುಂದುವರಿಸುತ್ತೇವೆ. ಆದರೆ ನಷ್ಟ ಶುರುವಾದರೆ ದರ ಕಡಿಮೆ ಮಾಡಬೇಕಾಗುತ್ತದೆ ಎಂದು ಅವರು ಹೇಳಿದರು.

ಮಾರಾಟವಾಗದ ಹಾಲಿಗೂ ಪ್ರತಿ ಲೀಟರ್‌ಗೆ 4 ರೂಪಾಯಿ ದರ ಹೆಚ್ಚಳ ಮಾಡಿ ಹಾಲು ಉತ್ಪಾದಕರಿಗೆ ನೀಡುವುದರಿಂದ ಹಾಸನ ಹಾಲು ಒಕ್ಕೂಟಕ್ಕೆ ದಿನಕ್ಕೆ 36 ಲಕ್ಷ ರೂಪಾಯಿ ಮತ್ತು ತಿಂಗಳಿಗೆ 9 ಕೋಟಿ ರೂಪಾಯಿ ನಷ್ಟವಾಗುತ್ತದೆ. ಇದು ಒಕ್ಕೂಟದ ಆರ್ಥಿಕ ಸ್ಥಿತಿಗೆ ದೊಡ್ಡ ಹೊಡೆತವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಒಂದು ಸಂಸ್ಥೆಯನ್ನು ಕಟ್ಟುವುದು ಸುಲಭವಲ್ಲ, ಕಟ್ಟಿರುವುದನ್ನು ಉಳಿಸಿಕೊಳ್ಳಬೇಕು ಎಂದ ಅವರು ಈ ಆತಂಕವನ್ನು ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇನೆ ಎಂದರು.

### ಧಿಮಾಕು ಮನೆಯಲ್ಲಿ ಇಟ್ಟುಕೊಳ್ಳಲಿ..!

ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ಎಂ. ಚಂದ್ರೇಗೌಡ ಅವರು ರಾಜೀನಾಮೆ ನೀಡದೆ ಇರುವ ಕುರಿತು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ರಾಜೀನಾಮೆ ನೀಡದಿದ್ದರೆ ಹೇಗೆ ಕೆಳಗಿಳಿಸಬೇಕೆಂಬುದು ನನಗೆ ಗೊತ್ತಿದೆ. ಆತನಿಗೆ ಧಿಮಾಕು ಇದ್ದರೆ ಮನೆಯಲ್ಲಿ ಇಟ್ಟುಕೊಳ್ಳಲಿ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಗುಡುಗಿದರು.

ನಗರಸಭೆ ಅಧ್ಯಕ್ಷರ ಬದಲಾವಣೆ ಮಾಡುವ ಬಗ್ಗೆ ಸೋಮವಾರ ತೀರ್ಮಾನ ತೆಗೆದುಕೊಳ್ಳುತ್ತೇವೆ. ಅವಿಶ್ವಾಸ ಮಂಡನೆಗೆ ಸಭೆ ಕರೆಯಲು ತಿಳಿಸಲಾಗಿದೆ. ಅದಕ್ಕೂ ಬಗ್ಗದಿದ್ದರೆ ಕಾನೂನು ಪ್ರಕಾರ ಏನು ಮಾಡಬೇಕೆಂಬುದು ಗೊತ್ತಿದೆ. 40 ವರ್ಷಗಳ ರಾಜಕೀಯ ಜೀವನದಲ್ಲಿ ಇಂತವರನ್ನು ಸಾಕಷ್ಟು ನೋಡಿದ್ದೇನೆ. ಇದಕ್ಕೆಲ್ಲ ಹೆದರಿ ಕೂರುವುದಿಲ್ಲ ಎಂದರು.

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚಿಸಲಾಗಿತ್ತು, ನೀಡದ ಕಾರಣ ಅವಿಶ್ವಾಸ ಗೊತ್ತುವಳಿ ಮಂಡಿಸಲಾಗಿದೆ. ಆ ಮನುಷ್ಯನಿಗೆ ಗೌರವ ಇಲ್ಲ. ಒಂದು ಸಮುದಾಯಕ್ಕೆ ಅನುಕೂಲ ಮಾಡಿಕೊಡಬೇಕೆಂದು ಶಾಸಕರ ಮಾತಿಗೆ ಬೆಲೆ ನೀಡಿ ಅವಕಾಶ ನೀಡಲಾಗಿತ್ತು. ಬಜೆಟ್ ಮಂಡನೆ ಬಳಿಕ ರಾಜೀನಾಮೆ ನೀಡಬಹುದು ಎಂದು ಭಾವಿಸಿದ್ದೆವು. ಆತ ಈ ರೀತಿ ನಡೆದುಕೊಳ್ಳುತ್ತಾನೆಂದು ಗೊತ್ತಿದ್ದರೆ, ಬಜೆಟ್ ಮಂಡನೆಗೆ ಅವಕಾಶ ಮಾಡಿಕೊಡುತ್ತಿರಲಿಲ್ಲ. ಗೌರವ ತೆಗೆಯಬಾರದು ಎಂಬ ಕಾರಣಕ್ಕೆ ಸುಮ್ಮನಿದ್ದೆ ಎಂದರು.

6 ತಿಂಗಳಿಗೆ ರಾಜೀನಾಮೆ ನೀಡಬೇಕು ಎಂದು ಮೊದಲು ನನಗೆ ಯಾರೂ ಹೇಳಿರಲಿಲ್ಲ ಎಂದು ಹಾಸನಾಂಬದೇವಿ ಮುಂದೆ ಸತ್ಯ ಮಾಡಲಿ. ಸ್ಥಳೀಯ ಶಾಸಕರ ಕಾರಣಕ್ಕೆ ನಾನು ಇಷ್ಟು ದಿನ ಸುಮ್ಮನಿದ್ದೆ. ಶಾಸಕರ ಮಾತಿಗೂ ಆತ ಬೆಲೆ ನೀಡಿಲ್ಲ. ಮುಂದೆ ಕಾನೂನು ಪ್ರಕಾರ ಏನು ಮಾಡಬೇಕು ಗೊತ್ತಿದೆ. ಪಕ್ಷದ ಚೌಕಟ್ಟಿನಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದರು.

| ಕ್ರ.ಸಂ | ಒಕ್ಕೂಟದ ಹೆಸರು | ಹಾಲು ಶೇಖರಣೆ ಲಕ್ಷ ಕೆ.ಜಿಗಳಲ್ಲಿ | ಹಾಲು ಮಾರಾಟ ಲಕ್ಷ ಲೀ.ಗಳಲ್ಲಿ | ಮೊಸರು ಮಾರಾಟ ಲಕ್ಷ ಕೆ.ಜಿ ಗಳಲ್ಲಿ | ಒಟ್ಟು ಮಾರಾಟ ಲಕ್ಷ ಲೀ.ಗಳಲ್ಲಿ | ಹೆಚ್ಚುವರಿ/ಕೊರತೆ ಹಾಲು ಲಕ್ಷ ಲೀ.ಗಳಲ್ಲಿ | ದರ ಹೆಚ್ಚಳದಿಂದ ಆಗುವ ಹೆಚ್ಚುವರಿ ಮೊತ್ತ (ಮಾಹೆಯಾನ ಕೋಟಿ.ರೂ ಗಳಲ್ಲಿ) |
|---|---|---|---|---|---|---|---|
| 1 | ಬೆಂಗಳೂರು | 15.24 | 9.81 | 2.18 | 11.99 | 3.25 | |
| 2 | ಕೋಲಾರ | 10.06 | 4.69 | 0.91 | 5.60 | 4.46 | (-) 0.50 ಕೋಟಿ |
| 3 | ಮೈಸೂರು | 8.15 | 3.02 | 0.86 | 3.88 | 4.27 | (-) 5 ಕೋಟಿ |
| 4 | ಚಾಮರಾಜನಗರ | 2.55 | 0.48 | 0.15 | 0.63 | 1.92 | (-) 1.50 ಕೋಟಿ |
| 5 | ಮಂಡ್ಯ | 10.21 | 4.09 | 0.93 | 5.02 | 5.19 | (-) 7 ಕೋಟಿ |
| 6 | ತುಮಕೂರು | 8.49 | 3.26 | 1.21 | 4.47 | 4.02 | |
| 7 | ಹಾಸನ | 12.58 | 1.98 | 1.20 | 3.18 | 9.40 | (-) 9 ಕೋಟಿ |
| 8 | ಧಾರವಾಡ | 1.55 | 1.29 | 0.42 | 1.71 | -0.16 | |
| 9 | ಹಾವೇರಿ | 1.46 | 0.14 | 0.08 | 0.22 | 1.24 | |
| 10 | ಬೆಳಗಾಂ | 2.02 | 0.68 | 0.22 | 0.90 | 1.12 | (-) 1.20 ಕೋಟಿ |
| 11 | ಬಿಜಾಪುರ | 1.59 | 0.71 | 0.08 | 0.79 | 0.80 | (-) 2 ಕೋಟಿ |
| 12 | ಗುಲ್ಬರ್ಗ | 0.66 | 0.64 | 0.08 | 0.72 | -0.06 | |
| 13 | ದಕ್ಷಿಣ ಕನ್ನಡ | 3.43 | 4.02 | 0.86 | 4.88 | -1.45 | |
| 14 | ಶಿವಮೊಗ್ಗ | 7.02 | 2.86 | 0.93 | 3.79 | 3.23 | (-) 4.5 ಕೋಟಿ |
| 15 | ಬಳ್ಳಾರಿ | 2.06 | 1.45 | 0.16 | 1.61 | 0.45 | |
| 16 | ಚಿಕ್ಕಬಳ್ಳಾಪುರ | 4.10 | 2.56 | 0.54 | 3.10 | 1.00 | (-) 1 ಕೋಟಿ |

## ಸಕಲೇಶಪುರ ಹಳೇ ಹೆದ್ದಾರಿಗೆ ಅಭಿವೃದ್ಧಿ ಭಾಗ್ಯ: 10.48 ಕೋಟಿ ರೂ. ಅನುದಾನ



ಸಕಲೇಶಪುರ: ಪಟ್ಟಣದಲ್ಲಿ ಹಾದು ಹೋಗಿದ್ದ ರಾಷ್ಟ್ರೀಯ ಹೆದ್ದಾರಿ 75ಕ್ಕೆ ಬೈಪಾಸ್ ನಿರ್ಮಾಣವಾದ ನಂತರ ನಿರ್ವಹಣೆ ಇಲ್ಲದೆ ಹಾಳಾಗಿದ್ದ ಪಟ್ಟಣ ವ್ಯಾಪ್ತಿಯ ರಸ್ತೆ ಅಭಿವೃದ್ಧಿಗೆ ಕಾಲ ಕೂಡಿ ಬಂದಿದ್ದು, ಬುಧವಾರ ಶಾಸಕ ಸಿಮೆಂಟ್ ಮಂಜು 10.48ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕ, ಇಷ್ಟು ಪ್ರಮಾಣದ ಹಣ ನೀಡಿದ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಧನ್ಯವಾದ ಹೇಳಿದರು. ಇದರಿಂದ ಪಟ್ಟಣದ ಹಳೇ ಬಸ್ ನಿಲ್ದಾಣದಿಂದ ಹೊಸದಾಗಿ ಆಗಿರುವ ಹೈವೇ ವರೆಗೆ ಉತ್ತಮ ಹಾಗೂ ಗುಣಮಟ್ಟದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆಗಲಿದೆ ಎಂದರು.

ಹಳೇ ನ್ಯಾಷನಲ್ ಹೆದ್ದಾರಿಯನ್ನು ಮರು ಡಾಂಬರೀಕರಣ ಮಾಡಲು ಚಾಲನೆ ನೀಡಲಾಗಿದೆ. ಪಟ್ಟಣದ ಕೊಲ್ಲಹಳ್ಳಿಯಿಂದ ತೋಟದ ಗದ್ದೆ ಕೆಂಪೇಗೌಡರ ಪ್ರತಿಮೆವರೆಗೆ ಮರು ಡಾಂಬರೀಕರಣ ಮಾಡಲಾಗುವುದು. ಇದರ ಜೊತೆಗೆ ಬಾಳ್ಳುಪೇಟೆ ಟೌನ್ ಮಾರ್ಗ ಹಾಗೂ ಪಾಳ್ಯ ಹಳೇ ಹೈವೇಯನ್ನೂ ಮರು ಡಾಂಬರೀಕರಣ ಮಾಡಲಾಗುವುದು ಎಂದು ಹೇಳಿದರು.

ಕೊಲ್ಲಹಳ್ಳಿ ಹತ್ತಿರ ಮತ್ತು ಸಕಲೇಶಪುರ ಸೇತುವೆ ಹತ್ತಿರ ಹಳೇ ರಾಷ್ಟ್ರೀಯ ಹೆದ್ದಾರಿ ತುಂಬಾ ಹಾಳಾಗಿದೆ. ಹಾಗಾಗಿ ಉತ್ತಮ ರೀತಿಯಲ್ಲಿ ಕಾಮಗಾರಿ ಮಾಡಲಾಗುವುದು. ಈಗಾಗಲೇ ಗುಣಮಟ್ಟದ ರಸ್ತೆ ಮಾಡಬೇಕು ಎಂದು ಎಇಇ ಅವರಿಗೆ ಸೂಚನೆ ಕೊಟ್ಟಿದ್ದೇನೆ. ತುರ್ತಾಗಿ ಕೆಲಸ ಮುಗಿಸಲು ಹೇಳಿದ್ದೇನೆ ಎಂದ ಅವರು, ಹೆದ್ದಾರಿಗೆ ಹಣ ನೀಡಿದ ಕೇಂದ್ರ ಸಚಿವರಿಗೆ ಮತ್ತೊಮ್ಮೆ ಧನ್ಯವಾದ ಹೇಳಿದರು.

## ಎಲ್ಪಿಜಿ ಸಿಲಿಂಡರ್ ಸ್ಫೋಟ ಮೃತರ ಸಂಖ್ಯೆ 2ಕ್ಕೆ ಏರಿಕೆ.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಮನೆಯಲ್ಲಿನ ಸಿಲಿಂಡರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಭೀರ ಗಾಯಗೊಂಡಿದ್ದ ಮತ್ತೊಬ್ಬ ಮಹಿಳೆ ಬುಧವಾರ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಕುಂಚಿಟಗರ ಬೀದಿಯ ರಾಧಮ್ಮ (59) ಮೃತರು. ಮಂಗಳವಾರ ಮಂಗಳ ಎಂಬುವರು ಅಸುನೀಗಿದ್ದರು. ಒಟ್ಟು ಗಾಯಾಳುಗಳ ಪೈಕಿ ಇಬ್ಬರು ಮೃತಪಟ್ಟಿದ್ದು, ಮೀನಾಕ್ಷಿ ಎಂಬುವವರಿಗೆ ಚಿಕಿತ್ಸೆ ಮುಂದುವರೆದಿದೆ.

ಕುಟುಂಬ ಸದಸ್ಯರೊಬ್ಬರು ನಿಧನರಾದ ಹಿನ್ನೆಲೆಯಲ್ಲಿ 11ನೇ ದಿನದ ಕಾರ್ಯ ಯುಗಾದಿ ದಿನವಾದ ಭಾನುವಾರ ನಿಗದಿಯಾಗಿತ್ತು. ಕಾದ ಎಣ್ಣೆ ಸಿಡಿದಿದ್ದರಿಂದ ಪೈಪ್ ತೂತಾಗಿ ಸಿಲಿಂಡರ್ ಸ್ಫೋಟಗೊಂಡಿತ್ತು.

## ಕಾಫಿ ಬೆಳೆಗಾರರಿಗೆ ವರವಾದ ಮಳೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನ ವಿವಿಧೆಡೆ ಬುಧವಾರ ಜೋರು ಮಳೆ ಸುರಿದು ಕಾಫಿ ಬೆಳೆಗಾರರಲ್ಲಿ ಮಂದಹಾಸ ಮೂಡಿಸಿದೆ.

ಬೆಳಿಗ್ಗೆ 11.30ರ ವೇಳೆ ಪಟ್ಟಣದಲ್ಲಿ ಏಕಾಏಕಿ ಆರಂಭವಾದ ಮಳೆ ಮಧ್ಯಾಹ್ನ 1.30ರ ವರೆಗೆ ಭರ್ಜರಿಯಾಗಿ ಸುರಿಯಿತು. ಏಕಾಏಕಿ ಭಾರಿ ಮಳೆ ಸುರಿದಿದ್ದರಿಂದ ಮಳೆಗಾಲದ ವಾತಾವರಣ ಪಟ್ಟಣದಲ್ಲಿ ನಿರ್ಮಾಣವಾಗಿತ್ತು. ದಿಢೀರ್ ಮಳೆ ಸುರಿದಿದ್ದರಿಂದ ಪಟ್ಟಣದಲ್ಲಿ ಬಿರುಬೇಸಿಗೆಯಲ್ಲಿಯೇ ಮಳೆಗಾಲದ ವಾತಾವರಣದ ಅನುಭವವಾಯಿತು. ಭಾರಿ ಮಳೆಯಿಂದಾಗಿ ಚರಂಡಿಗಳಲ್ಲಿ ನೀರು ಸಮರ್ಪಕವಾಗಿ ಹರಿಯದೆ ರಸ್ತೆಗಳಲ್ಲಿ ನೀರು ಸಂಗ್ರಹವಾಗಿ ಚಾಲಕರು ವಾಹನಗಳನ್ನು ಚಲಾಯಿಸಲು ತೊಂದರೆ ಅನುಭವಿಸಿದರು. ಪಟ್ಟಣದ ಆಜಾದ್ ರಸ್ತೆ, ಅಶೋಕ ರಸ್ತೆ ತಿರುವಿನಲ್ಲಿ ಭಾರೀ ಪ್ರಮಾಣದಲ್ಲಿ ನೀರು ಸಂಗ್ರಹವಾಗಿ ಜನರ ಓಡಾಟಕ್ಕೆ ತಡೆಯೊಡ್ಡಿತ್ತು. ಬಿಎಂ ರಸ್ತೆಯ ಕೆಲವಡೆಯೂ ಇದೇ ಸ್ಥಿತಿ ಇತ್ತು. ಮಳೆ ನಿಂತ ನಂತರ ನೀರು ನಿಧಾನವಾಗಿ ಹರಿದು ಹೋಯಿತು. ಬಿರುಸಿನ ಮಳೆ ಪಟ್ಟಣದ ಚರಂಡಿಗಳ ಸ್ವಚ್ಛತೆಯ ಮಹತ್ವದ ಪಾಠ ಮಾಡಿದ್ದು, ಪುರಸಭೆ ಮಳೆಗಾಲಕ್ಕೆ ಮುನ್ನ ಎಚ್ಚೆತ್ತುಕೊಳ್ಳಬೇಕಿದೆ.

## ವೀರಶೈವ-ಲಿಂಗಾಯತ ಮಹಾಸಭಾ ಜಿಲ್ಲಾ ಕಚೇರಿ ಉದ್ಘಾಟನೆ ನಾಳೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ತಣ್ಣೀರುಹಳ್ಳ ಮಠದ ಆವರಣದಲ್ಲಿ ಏ. 4ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಕಚೇರಿ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭೆ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ನೂತನ ಕಚೇರಿಯನ್ನು ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಉದ್ಘಾಟಿಸುವರು. ರಾಷ್ಟ್ರೀಯ ಘಟಕದ ಉಪಾಧ್ಯಕ್ಷೆ ಚಂದ್ರಕಲಾ, ರಾಷ್ಟ್ರೀಯ ಕಾರ್ಯದರ್ಶಿ ರೇಣುಕಾ ಪ್ರಸನ್ನ, ರಾಜ್ಯ ಪ್ರಧಾನ ಕಾರ್ಯದರ್ಶಿ ಸಾಗರನಹಳ್ಳಿ ನಟರಾಜ್, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ




ತಗಡೂರು, ವೀರಶೈವ ಸಂಘದ ಅಧ್ಯಕ್ಷ ಬಿ.ಪಿ. ಐಸಾಮಿಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮಾಜಿ ಶಾಸಕ ಬಿ.ಆರ್. ಗುರುದೇವ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ತಾತ್ಕಾಲಿಕ ಕಚೇರಿ ಇದಾಗಿದ್ದು ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗುವುದು. ಲಿಂಗಾಯತ ಸಮುದಾಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಸ್ಟೆಲ್, ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ಕೋಚಿಂಗ್ ಕೇಂದ್ರ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

# ಸಾಮಾಜಿಕ ಸೇವೆಯೇ ಪರಮ ಗುರಿ

## ಯಶಸ್ವಿ ಸಂಘಟಕ ಬೊಮ್ಮೇಗೌಡರ ಯಶೋಗಾಥೆ ಒಲಿದುಬಂದ ಪಿಕೆಪಿಎಸ್ ಅಧ್ಯಕ್ಷ ಹುದ್ದೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಆರೋಗ್ಯ, ಶಿಕ್ಷಣ, ಕ್ರೀಡೆ, ಗ್ರಾಮದ ಸರ್ವಾಂಗೀಣ ಅಭಿವೃದ್ಧಿಯ ದೊಡ್ಡ ಕನಸಿನೊಂದಿಗೆ ಬೂವನಹಳ್ಳಿಯ ಬೊಮ್ಮೇಗೌಡ ಧಾರ್ಮಿಕ, ರಾಜಕೀಯ ಸಾರ್ವಜನಿಕ ಸೇವಾಕ್ಷೇತ್ರ ಹೀಗೆ ಹಲವು ಕ್ಷೇತ್ರದಲ್ಲಿ ನಿರಂತರ ತೊಡಗಿಸಿಕೊಳ್ಳುವ



ಮೂಲಕ ಜನಮೆಚ್ಚುಗೆಗೆ ಪಾತ್ರವಾಗಿದ್ದಾರೆ.

ನಗರದ ಹೊರ ವಲಯದ ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಬುಧವಾರ ಆಯ್ಕೆಯಾಗಿರುವ ಬೊಮ್ಮೇಗೌಡ ತಾವು ಕಂಡ ಕನಸನ್ನು ಸಾಕಾರಗೊಳಿಸಲು ಒಂದೊಂದೆ ಮೆಟ್ಟಿಲುಗಳನ್ನು ಏರುತ್ತಿದ್ದಾರೆ.



### ಬೊಮ್ಮೇಗೌಡರಿಗೆ ಸಂದ ಪ್ರಶಸ್ತಿಗಳು

- ರೋಟರಿ ಸಂಸ್ಥೆ ಸಮರ್ಥವಾಗಿ ಮುನ್ನಡೆಸಿದ್ದಕ್ಕಾಗಿ 2023-24ನೇ ಸಾಲಿನಲ್ಲಿ ರೋಟರಿ ಜಿಲ್ಲೆ 3182 ರಲ್ಲಿ ಬೆಸ್ಟ್ ಕ್ಲಬ್ ಅವಾರ್ಡ್ ದೊರೆತಿದೆ.
- ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ
- ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ
- ಸಂಘ, ಸಂಸ್ಥೆಗಳಿಂದ ಗೌರವ

**ಶ್ರಮ ಸೇವೆ**

- ಗ್ರಾಮೀಣ ಕ್ರೀಡಾ ಸ್ಪರ್ಧೆ, ಉತ್ತೇಜನ
- ಗ್ರಾಮದ ಸರ್ಕಾರಿ ಶಾಲೆಗೆ ಮೂಲ ಸೌಲಭ್ಯ
- ಗ್ರಾಮದ ಆಸ್ಪತ್ರೆಗೆ ಮೂಲಸೌಲಭ್ಯ ಒದಗಿಸಲು ಶ್ರಮ

### ಬೊಮ್ಮೇಗೌಡರ ಪರಿಚಯ

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಬೂವನಹಳ್ಳಿಯ ಶಾಲೆಯಲ್ಲಿಯೇ ಪೂರ್ಣಗೊಳಿಸಿ, ಎಂಬಿಎ ,ಎಂಎ ರಾಜ್ಯಶಾಸ್ತ್ರ, ಬಿಇಡಿ ಪದವೀಧರರು ಆಗಿರುವ ಬೊಮ್ಮೇಗೌಡ ಸಾಮಾಜಿಕ ಸೇವೆಯಲ್ಲಿಯೇ ಹೆಚ್ಚಿನ ತೃಪ್ತಿ ಎನ್ನುತ್ತಾರೆ. ಜನರ ಕಷ್ಟ, ಸುಖಗಳಿಗೆ ಸ್ಪಂದಿಸಿ ನೊಂದವರ ಮೊಗದಲ್ಲಿ ಸಂತಸ ಮೂಡಿದಾಗ ನಮಗೆ ಅದೇ ಮತ್ತಷ್ಟು ಕೆಲಸಕ್ಕೆ ಸ್ಫೂರ್ತಿ ಎನ್ನುತ್ತಾರೆ. ವ್ಯಾಸಂಗದ ಬಳಿಕ ಖಾಸಗಿ ಕಂಪನಿಯಲ್ಲಿ ವಲಯ ಮಟ್ಟದ ಪ್ರತಿನಿಧಿಯಾಗಿ ಕೆಲಸಕ್ಕೆ ಸೇರಿದವರು ಆ ಬಳಿಕ 2023ರಲ್ಲಿ ಕಸಾಪ ಗೌರವ ಕಾರ್ಯದರ್ಶಿಯಾಗಿ ನೇಮಕಗೊಂಡರು. ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಗ್ರಾಮ ಮಟ್ಟಕ್ಕೆ ಕೊಂಡೊಯ್ದು ಸ್ವಗ್ರಾಮ ಬೂವನಹಳ್ಳಿಯಲ್ಲಿ ಯಶಸ್ವಿಯಾಗಿ ಸಾಹಿತ್ಯದ ಕಂಪನ್ನು ಹರಿಸಿದ್ದು, ಸಮ್ಮೇಳನದ ಯಶಸ್ಸಿಗೆ ಟೊಂಕಕಟ್ಟಿ ನಿಂತು ತಮ್ಮ ಕನ್ನಡ ಪ್ರೇಮ ಮೆರೆದಿದ್ದನ್ನು ಸಾಹಿತಿಗಳು ಇಂದಿಗೂ ಸ್ಮರಿಸುತ್ತಾರೆ. ಆದಿಚುಂಚನಗಿರಿ ಹಾಸನ ಶಾಖಾಮಠದ ಮಾಧ್ಯಮ ಉಸ್ತುವಾರಿಯಾಗಿ, ಗುರು ತೋರಿದ ದಾರಿ ತಿಂಗಳ ಮಾಮನ ತೇರು ಹುಣ್ಣಿಮೆ ಕಾರ್ಯಕ್ರಮವನ್ನು ಗ್ರಾಮ ಮಟ್ಟದಲ್ಲೂ ನಡೆಸಿದ ಹಿರಿಮೆ, ರೋಟರಿ ಸಂಸ್ಥೆ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದೇನೆ ಎಂದು ಹೇಳುವಾಗ ಅವರಲ್ಲಿ ಒಂದು ರೀತಿ ನಿರಾಳತೆಯ ಭಾವ.

ವಿದ್ಯಾರ್ಥಿ ದಿಸೆಯಲ್ಲಿ ಜೆಡಿಎಸ್ ವಿದ್ಯಾರ್ಥಿ ಘಟಕದ ಜಿಲ್ಲಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದಾಗಿನಿಂದ ರಾಜಕಾರಣದತ್ತ ಸೆಳೆತವಿತ್ತು. ಈ ಕಾರಣದಿಂದಲೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದೇನೆ. ಆ ಮೂಲಕ ತನ್ನ ಮೇಲೆ ನಂಬಿಕೆ ಇರಿಸಿ ಆಶೀರ್ವದಿಸಿದ ಸದಸ್ಯರ ಹಾಗೂ ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು ಬಿ.ಆರ್. ಬೊಮ್ಮೇಗೌಡ. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ, ಬೆಳೆದು ಪಟ್ಟಣ ಸೇರುವುದು ದೊಡ್ಡ ವಿಷಯವಲ್ಲ ತಾನು ಜನ್ಮತಳೆದ, ಊರಿಗೆ ಏನಾದರೂ ಕೊಡುಗೆ ನೀಡಬೇಕು ಹಳ್ಳಿಯನ್ನೇ ನಗರವನ್ನಾಗಿ ಮಾಡುವ ನಿಟ್ಟಿನಲ್ಲಿ ಜನರನ್ನು ಸಂಘಟಿಸಬೇಕು ಎಂಬ ಅಭಿಲಾಷೆ ತನ್ನದು. ಆ ಕಾರಣದಿಂದಲೇ ಸದಾಕಾಲ ಒಂದಲ್ಲ ಒಂದು ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತೇನೆ ಎನ್ನುತ್ತಾರೆ.


### ಬೂವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬೊಮ್ಮೇಗೌಡ ಸಾರಥಿ

ಹಾಸನ: ತಾಲ್ಲೂಕಿನ ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಬಿ.ಆರ್. ಬೊಮ್ಮೇಗೌಡ ಹಾಗೂ ಉಪಾಧ್ಯಕ್ಷರಾಗಿ ವಿಜಯಲಕ್ಷ್ಮಿ ಬುಧವಾರ ಆಯ್ಕೆಯಾದರು.

11 ಸದಸ್ಯ ಬಲದ ಸಂಘದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಆರ್. ಬೊಮ್ಮೇಗೌಡ ಹಾಗು ಗಣೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಇಂದ್ರಮ್ಮ ಹಾಗು ವಿಜಯಲಕ್ಷ್ಮಿ ನಾಮಪತ್ರ ಸಲ್ಲಿಸಿದ್ದರು. ಬಿ.ಆರ್. ಬೊಮ್ಮೇಗೌಡ ಮತ್ತು ವಿಜಯಲಕ್ಷ್ಮಿ ತಲಾ 6 ಮತ ಪಡೆದು ಆಯ್ಕೆಯಾದರು.

ಶಾಸಕ ಹೆಚ್.ಪಿ. ಸ್ವರೂಪ್, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಸ್ವಾಮಿಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಜಯರಾಂ, ಬೂವನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ತುಳಸಿರಾಂ, ಸಹಕಾರ ಸಂಘದ ಮಾಜಿ ಅಧ್ಯಕ್ಷ ಮಲ್ಲೇಶ ಹಾಗೂ ಬೂವನಹಳ್ಳಿ ಗ್ರಾಮಸ್ಥರು ಅಭಿನಂದಿಸಿದರು. ಚುನಾವಣೆ ಮುಗಿದ ಬಳಿಕ ಬೆಂಬಲಿಗರು, ಅಭಿಮಾನಿಗಳು ಹಾಗು ಗ್ರಾಮಸ್ಥರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಪರಸ್ಪರ ಜಯಘೋಷ ಮೊಳಗಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

> ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನ ಚುನಾವಣೆಯೊಂದಿಗೆ ನಮ್ಮ ನಡುವಿನ ಪೈಪೋಟಿ ಮುಕ್ತಾಯವಾಗಿದೆ. ಇನ್ನು ಮುಂದೆ ಎಲ್ಲರೂ ಒಗ್ಗೂಡಿ ಸಂಘದ ಅಭಿವೃದ್ಧಿಗೆ ಶ್ರಮಿಸೋಣ. ಎಲ್ಲಾ ನಿರ್ದೇಶಕರ ಸಹಕಾರ ಬಯಸುತ್ತೇನೆ. ಒಟ್ಟಾಗಿ ಉತ್ತಮ ಕೆಲಸ-ಕಾರ್ಯಗಳ ಮೂಲಕ ಸಂಘವನ್ನು ಮಾದರಿಯಾಗಿ ಬೆಳೆಸೋಣ.
>
> **-ಬಿ.ಆರ್. ಬೊಮ್ಮೇಗೌಡ, ಬೂವನಹಳ್ಳಿ ಪಿಕೆಪಿಎಸ್ ಅಧ್ಯಕ್ಷ**



### ಆರೋಗ್ಯ ಶಿಬಿರ


ಊರಿನ ಜನರ ಆರೋಗ್ಯ ದೃಷ್ಟಿಯಿಂದ ಆರೋಗ್ಯ ಶಿಬಿರ ಏರ್ಪಡಿಸಿ ತಪಾಸಣೆ, ಚಿಕಿತ್ಸೆ ಕೊಡಿಸಲು ಶ್ರಮಿಸಿದ್ದು ಮೆಚ್ಚುಗೆಗೆ ಪಾತ್ರವಾಗಿದೆ. ಆ ಕಾರ್ಯಕ್ರಮಕ್ಕೆ ಬಂದಿದ್ದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಕೂಡ ಪ್ರಶಂಸೆ ವ್ಯಕ್ತಪಡಿಸಿದ್ದರು. ಇಂತಹ ಹತ್ತು ಹಲವು ಕಾರ್ಯಕ್ರಮದ ಮೂಲಕ ಜನ ಸೇವೆಗೆ ಮುಡಿಪಾಗಿದ್ದು, ತನಗೆ ಸಂತಸ ತಂದಿದೆ. ತಮ್ಮ ತಂದೆ ಪಶುವೈದ್ಯ ಇಲಾಖೆ ನಿವೃತ್ತ ನೌಕರ ಹಾಗೂ ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ರಂಗೇಗೌಡ, ತಾಯಿ ಜಯಮ್ಮ ಅವರ ಆಶೀರ್ವಾದ, ಪತ್ನಿ ಉಷಾ ಬೊಮ್ಮೇಗೌಡ ಅವರ ನಿರಂತರ ಸಹಕಾರ ತನ್ನ ಜನಪರ ಕಾರ್ಯಕ್ಕೆ ಮಾರ್ಗದರ್ಶಿಯಾಗಿದೆ ಎನ್ನುತ್ತಾರೆ ಬೊಮ್ಮೇಗೌಡ.

ಆಧುನಿಕ ಯುಗದಲ್ಲಿ ಗ್ರಾಮೀಣ ಕ್ರೀಡೆ ಸೊರಗಿದೆ, ಕ್ರೀಡೆಯಿಂದ ಆರೋಗ್ಯವೃದ್ಧಿ ಎಂಬುದನ್ನು ಮನಗಂಡು ನಶಿಸುತ್ತಿರುವ ಗ್ರಾಮೀಣ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ನಿರ್ಧರಿಸಿದ್ದೇನೆ. ಸಹಕಾರ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿರುವ ತಾನು ಅಲ್ಲೂ ಸಹಕಾರ ಮನೋಭಾವದಿಂದ ಚ್ಯುತಿ ಬಾರದಂತೆ ಶ್ರಮಿಸಬೇಕು ಎಂಬ ನಿರ್ಧಾರ ಮಾಡಿದ್ದೇನೆ ಎಂದು ಮಹತ್ವಾಕಾಂಕ್ಷೆಯಿಂದ ಹೇಳುತ್ತಾರೆ ಬೊಮ್ಮೇಗೌಡ.

# ಸಕ್ಷಮ್ ಯೋಜನೆಯಡಿ 764 ಅಂಗನವಾಡಿಗೆ ಎಲ್‌ಇಡಿ ಟಿವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಂಗನವಾಡಿ ಮಕ್ಕಳ ಕಲಿಕೆಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಸಕ್ಷಮ್ ಯೋಜನೆಯಡಿ ಎಲ್‌ಇಡಿ ಟಿವಿ ವಿತರಣೆ ಮಾಡುತ್ತಿದ್ದು ಜಿಲ್ಲೆಗೆ 764 ಟಿವಿಗಳು ತಲುಪಿವೆ.




ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿ, ಏಕಾಗ್ರತೆ ಮಟ್ಟ ಹೆಚ್ಚಲಿ ಎಂಬ ಉದ್ದೇಶದಿಂದ ದೇಶಾದ್ಯಂತ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 2691 ಅಂಗನವಾಡಿ ಕೇಂದ್ರಗಳಿದ್ದು ಅದರಲ್ಲಿ 764 ಕೇಂದ್ರಗಳಿಗೆ ಟಿವಿ ಸರಬರಾಜು ಆಗಿವೆ. ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಮೂಲಕ ಆಯ್ದ ಅಂಗನವಾಡಿಗಳಿಗೆ ಶೀಘ್ರದಲ್ಲೇ ಟಿವಿಗಳು ತಲುಪಲಿವೆ.

ಹಾಸನ ತಾಲ್ಲೂಕಿನ 175, ಚನ್ನರಾಯಪಟ್ಟಣದ 100, ಹೊಳೆನರಸೀಪುರದ 107, ಬೇಲೂರು 79, ಸಕಲೇಶಪುರ 107, ಆಲೂರು 10, ಅರಸೀಕೆರೆ ತಾಲ್ಲೂಕಿನ 76, ಅರಕಲಗೂಡಿನ 110 ಅಂಗನವಾಡಿಗಳಿಗೆ ಎಲ್‌ಇಡಿ ಟಿವಿಗಳು ಸರಬರಾಜು ಆಗುತ್ತಿವೆ.

ಸಕ್ಷಮ್ ಯೋಜನೆಯಡಿ ಎಲ್‌ಇಡಿ ಟಿವಿ ವಿತರಣೆಗೆ ಕೇಂದ್ರ ಸರ್ಕಾರ ಕೆಲವು ಮಾನದಂಡಗಳನ್ನು ಹಾಕಿಕೊಂಡಿತ್ತು. ಸ್ವಂತ ಕಟ್ಟಡ ಹಾಗು ಕ್ರಿಯಾಶೀಲ ಕಾರ್ಯಕರ್ತೆಯರು ಇರುವ ಕೇಂದ್ರಗಳಿಗೆ ಮಾತ್ರ ಟಿವಿ ನೀಡಬೇಕು. ಜೊತೆಗೆ ಆ ಅಂಗನವಾಡಿಗಳಲ್ಲಿ ವಿದ್ಯುತ್, ಬೆಳಕಿನ ವ್ಯವಸ್ಥೆ ಚೆನ್ನಾಗಿರಬೇಕು. ಅಂತಹ ಕೇಂದ್ರಗಳಿಗೆ ಟಿವಿ ನೀಡಿದರೆ ಅದರ ಪ್ರಯೋಜನವಾಗುತ್ತದೆ. ಒಂದು ವೇಳೆ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳಿಗೆ ನೀಡಿದರೆ ಸ್ಥಳಾಂತರ ಸಮಯದಲ್ಲಿ ಹಾನಿಯಾಗಬಹುದು ಎಂಬ ಲೆಕ್ಕಾಚಾರವನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ.

ಎಲ್‌ಇಡಿ ಟಿವಿಯಲ್ಲಿ ಚಿಣ್ಣರ ಚಿಲಿಪಿಲಿ, ಪರಿಸರ ಪ್ರಿಯ ಕಾರ್ಯಕ್ರಮಗಳು, ಏಕವ್ಯಕ್ತಿ ಪ್ರದರ್ಶನ ಈ ರೀತಿಯ ಕಾರ್ಯಕ್ರಮಗಳನ್ನು ಮಕ್ಕಳು ವೀಕ್ಷಿಸಬಹುದು. ಕಂದಮ್ಮಗಳ ಏಕಾಗ್ರತೆ ವೃದ್ಧಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತದೆ. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಅಧಿಕಾರಿಗಳಿಗೆ ಈ ಸಂಬಂಧ ತರಬೇತಿ ನೀಡಲಾಗಿದೆ. ಸರ್ಕಾರ ನಿಗದಿಪಡಿಸಿದ ಕಾರ್ಯಕ್ರಮಗಳಷ್ಟೇ ಪ್ರಸಾರವಾಗುವುದರಿಂದ ಎಲ್‌ಇಡಿ ಟಿವಿಗಳ ದುರ್ಬಳಕೆ ಆಗುವುದಿಲ್ಲ ಎಂಬ ನಂಬಿಕೆಯಿದೆ.

ಸಕ್ಷಮ್ ಯೋಜನೆಯಡಿ ಫ್ರಿಡ್ಜ್, ಸೋಲಾರ್, ಮಳೆ ನೀರಿನ ಕೊಯ್ಲು ಯಂತ್ರವನ್ನು ಅಳವಡಿಸುವ ಕುರಿತು ಯೋಜನೆ ರೂಪಿಸಿದ್ದು ಅಂಗನವಾಡಿಗಳ ಪಟ್ಟಿ ಸಹ ಸಿದ್ಧವಾಗಿದೆ. ಆ ಮೂಲಕ ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ.

## ಮೂಲಸೌಲಭ್ಯ ಮರೀಚಿಕೆ

ಜಿಲ್ಲೆಯ 2691 ಅಂಗನವಾಡಿಗಳ ಪೈಕಿ 764 ಕೇಂದ್ರಗಳಿಗೆ ಮಾತ್ರ ಎಲ್‌ಇಡಿ ಟಿವಿ ಲಭ್ಯವಾಗಿದ್ದು, ಉಳಿದ ಕೇಂದ್ರಗಳು ಸೌಲಭ್ಯದಿಂದ ಹೊರಗುಳಿದಿವೆ. ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾತಿ ಕುಸಿತ ಹಾಗೂ ಮೂಲಸೌಲಭ್ಯಗಳ ಮರೀಚಿಕೆಯೇ ಟಿವಿ ಬಾರದೆ ಇರಲು ಕಾರಣವಾಗಿದೆ. ಕೆಲವು ಅಂಗನವಾಡಿ ಕೇಂದ್ರಗಳಲ್ಲಿ ಖಾಯಂ ನೌಕರರೇ ಇಲ್ಲ. ಹಾಸನ ತಾಲ್ಲೂಕು ಒಂದರಲ್ಲೇ ಮೇಲ್ವಿಚಾರಕರ ಕೊರತೆಯಿಂದಾಗಿ ಮೂರು ಕೇಂದ್ರಕ್ಕೆ ಒಬ್ಬರನ್ನು ನಿಯೋಜಿಸುವಂತಾಗಿದೆ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಹೆಚ್ಚು ಖರ್ಚಾದರೂ ಪರವಾಗಿಲ್ಲ ಉತ್ತಮ ಶಿಕ್ಷಣ ಸಿಗಲಿ ಎಂಬ ಕಾರಣಕ್ಕೆ ಖಾಸಗಿ ನರ್ಸರಿ ಶಾಲೆಗಳಿಗೆ ದಾಖಲಿಸುತ್ತಿದ್ದಾರೆ. ಜಿಲ್ಲೆಯ ಬಹುತೇಕ ಅಂಗನವಾಡಿ ಕಟ್ಟಡಗಳು ಶಿಥಿಲಾವಸ್ಥೆ ತಲುಪಿದ್ದು ಮಕ್ಕಳು ಜೀವ ಭಯದಲ್ಲೇ ಬರುವಂತಾಗಿದೆ. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಒಟ್ಟಾಗಿ ಅಂಗನವಾಡಿಗಳಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕಿದೆ.

ಸಕ್ಷಮ್ ಯೋಜನೆಯಡಿ ಜಿಲ್ಲೆಗೆ 764 ಎಲ್‌ಇಡಿ ಟಿವಿಗಳು ತಲುಪಿವೆ. ಮೂಲಸೌಕರ್ಯ ಹೊಂದಿರುವ ಹಾಗು ಸಕ್ರಿಯ ಕಾರ್ಯಕರ್ತರಿರುವ ಅಂಗನವಾಡಿ ಕೇಂದ್ರಗಳಿಗೆ ಮಾತ್ರ ಟಿವಿ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಫ್ರಿಡ್ಜ್, ಸೋಲಾರ್ ಸೌಲಭ್ಯವು ದೊರೆಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಧರಣಿಕುಮಾರ್ ಹೇಳಿದರು.

# ರಾಮನಾಥಪುರ: ರಸ್ತೆ ಸೌಲಭ್ಯ ಪಡೆದ ಖಬರಸ್ತಾನ್



ಅರಕಲಗೂಡು: ತಾಲ್ಲೂಕಿನ ರಾಮನಾಥಪುರ ಗ್ರಾಮದ ಮುಸ್ಲಿಂ ಸಮುದಾಯಕ್ಕೆ ಮಂಜೂರಾಗಿದ್ದ ಸ್ಮಶಾನ ಜಾಗಕ್ಕೆ ತೆರಳಲು ರಸ್ತೆಯನ್ನು ಗುರುತು ಮಾಡಿಕೊಡಲಾಯಿತು ಎಂದು ಗ್ರೇಡ್-2 ತಹಶೀಲ್ದಾರ್ ಸಿ.ಆರ್. ಸ್ವಾಮಿ ತಿಳಿಸಿದರು.

ಬಿಳಗುಲಿ ಗ್ರಾಮದ ಸ.ನಂ. 17ರಲ್ಲಿ ಮುಸ್ಲಿಂ ಸಮುದಾಯಕ್ಕೆ ಶವಸಂಸ್ಕಾರ ಮಾಡಲು 1 ಎಕರೆ ಜಾಗ 2016-2017ನೇ ಸಾಲಿನಲ್ಲಿ ಮಂಜೂರಾಗಿದ್ದು, ಈ ಪ್ರದೇಶಕ್ಕೆ ತೆರಳಲು ಸೂಕ್ತ ದಾರಿ ಇರಲಿಲ್ಲ. ರಸ್ತೆಗೆ ಜಾಗ ಕೋರಿ ಮುಸ್ಲಿಂ ಸಮುದಾಯದವರು ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿ ಮನವಿ ಮಾಡಿದ್ದರು. ತಹಶೀಲ್ದಾರ್ ಕೆ.ಸಿ. ಸೌಮ್ಯ ರವರ ಸೂಚನೆಯಂತೆ ಸ್ಥಳಕ್ಕೆ ಸ್ಥಳಕ್ಕೆ ತಾಲ್ಲೂಕು ಮೋಜಿಣಿದಾರರಿಂದ ಅಳತೆ ಕಾರ್ಯ ನಡೆಸಿ ಸದರಿ ಪ್ರದೇಶದಲ್ಲಿ ಅಕ್ರಮ ಸಕ್ರಮದಡಿ ಅರ್ಜಿ ಸಲ್ಲಿಸಿ ಸಾಗುವಳಿ ಮಾಡುತ್ತಿದ್ದ ಬಿಳಗುಲಿ ಗ್ರಾಮದ ರೈತರ ಮನವೊಲಿಸಿ ಜೆ.ಸಿ.ಬಿ. ಯಂತ್ರದಿಂದ ರಸ್ತೆ ಕೆಲಸ ಪೂರ್ಣಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

# ಅಕ್ರಮ ಮರಳು ಮೂಟೆ ವಶಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಹೇಮಾವತಿ ನದಿ ತೀರದಲ್ಲಿ ಅಕ್ರಮ ಮರಳು ಸಾಗಾಟ ನಡೆಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಪೊಲೀಸರು ದಿಢೀರ್ ದಾಳಿ ನಡೆಸಿ ಶೇಖರಣೆ ಮಾಡಿದ್ದ 100ಕ್ಕೂ ಹೆಚ್ಚು ಮರಳು ಚೀಲಗಳನ್ನು ವಶಪಡಿಸಿಕೊಂಡಿದ್ದಾರೆ.



ಇನ್ಸಪೆಕ್ಟರ್ ಜಗದೀಶ್ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ನದಿ ತೀರದಲ್ಲಿ ಚೀಲಗಳಲ್ಲಿ ತುಂಬಿ ಇಡಲಾಗಿದ್ದ ಮರಳವನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಇತ್ತೀಚೆಗೆ ಅಕ್ರಮ ಮರಳುಗಾರರು ಹಗಲಿನಲ್ಲಿ ಮರಳನ್ನು ಸಂಗ್ರಹಿಸಿ ರಾತ್ರಿ ವೇಳೆ ಸ್ಕೂಟಿ ಹಾಗೂ ಓಮಿನಿ ವಾಹನಗಳ ಮೂಲಕ ಸಾಗಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಪೊಲೀಸರು ಪಡೆದಿದ್ದರು. ಈ ಹಿನ್ನೆಲೆಯಲ್ಲಿ ಮಂಗಳವಾರ ದಾಳಿ ನಡೆಸಿ ಮರಳು ಸಂಗ್ರಹವನ್ನು ವಶಪಡಿಸಿಕೊಂಡರು.

ತಾಲ್ಲೂಕಿನ ವಿವಿಧೆಡೆ ಅಕ್ರಮ ಮರಳುಗಾರಿಕೆ ಭಾರಿ ಪ್ರಮಾಣದಲ್ಲಿ ನಡೆಯುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿದೆ. ಹೇಮಾವತಿ ನದಿ ತೀರದಲ್ಲೇ ಅಲ್ಲದೆ, ಹೆತ್ತೂರು ಯಸಳೂರು ಭಾಗದ ಪ್ರದೇಶಗಳಲ್ಲಿಯೂ ಈ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಅಕ್ರಮ ಮರುಳುಗಾರಿಕೆ ಬಗ್ಗೆ ಧ್ವನಿ ಎತ್ತಿದವರ ಮೇಲೆ ಹಲ್ಲೆಗಳು ಸಹ ನಡೆಯುತ್ತಿದೆ. ಕೆಲವು ದಿನಗಳ ಹಿಂದೆ ಯಸಳೂರು ಭಾಗದಲ್ಲಿ ಅಕ್ರಮ ಮರಳುಗಾರರು ವ್ಯಕ್ತಿಯೊಬ್ಬನ ಮೇಲೆ ಹಲ್ಲೆ ನಡೆಸಿರುವ ಘಟನೆ ಸಹ ನಡೆದಿತ್ತು. ಅಕ್ರಮವಾಗಿ ಮರಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಈ ಜಾಲವನ್ನು ಪತ್ತೆ ಹಚ್ಚಲು ಪೊಲೀಸರು ಮುಂದಾಗಿದ್ದಾರೆ.

ಅಧಿಕೃತ ಅನುಮತಿ ಇಲ್ಲದೆ ನಡೆಯುತ್ತಿರುವ ಈ ಮರಳುಗಾರಿಕೆಯು ಪರಿಸರಕ್ಕೆ, ಸೇತುವೆಯ ಮೂಲ ವಿನ್ಯಾಸಕ್ಕೆ ಮತ್ತು ನದಿಯ ಪ್ರಾಕೃತಿಕ ಹರಿವಿಗೆ ಅಪಾಯ ಉಂಟುಮಾಡುತ್ತಿದೆ. ಸಾರ್ವಜನಿಕರು ಈ ದಂಧೆಯ ಕುರಿತು ಮಾಹಿತಿ ಇದ್ದರೆ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ಮನವಿ ಮಾಡಿದರು.

ಕಾರ್ಯಾಚರಣೆಯಲ್ಲಿ ಪಿಎಸ್‌ಐ ಮಹೇಶ್, ಕ್ರೈಂ ಪಿಎಸ್‌ಐ ಕೃಷ್ಣಪ್ಪ, ಶ್ರೀಧರ್, ಪೃಥ್ವಿ, ಶಾಂತರಾಜು, ಚಂದ್ರಕಾಂತ್ ಹಾಗೂ ಚಾಲಕ ಮಧು ಇತರರಿದ್ದರು.

# ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ 7 ಎಕರೆ ಜಾಗ: ಎ. ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಬಹು ನಿರೀಕ್ಷಿತ 220 ಕೆವಿ ವಿದ್ಯುತ್ ಸ್ಥಾವರ ನಿರ್ಮಿಸಲು ಅಲ್ಲಾಪಟ್ಟಣ ಬಳಿ ಸರ್ವೆ ನಂ. 59ರಲ್ಲಿ 7.10 ಎಕರೆ ಜಾಗ ಮಂಜೂರು ಮಾಡಲಾಗಿದೆ ಎಂದು ಶಾಸಕ ಎ. ಮಂಜು ತಿಳಿಸಿದರು.



ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಕಂದಾಯ, ಕೆಪಿಟಿಸಿಎಲ್, ಸೆಸ್ಕ್ ಹಾಗೂ ಸರ್ವೆ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 9 ವರ್ಷಗಳ ಹಿಂದೆ ಕಣಿಯಾರು ಗ್ರಾಮದ ಬಳಿ ಈ ಯೋಜನೆಗೆ ಜಮೀನು ನೀಡಲಾಗಿತ್ತು. 130 ಕೋಟಿ ರೂ. ಹಣ ಕೂಡ ಬಿಡುಗಡೆಯಾಗಿತ್ತು. ವಿದ್ಯುತ್ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅಂದು ಕೆಲಸ ಆರಂಭಗೊಳ್ಳಲಿಲ್ಲ. ಈ ಸಂದರ್ಭವನ್ನು ಬಳಕೆ ಮಾಡಿಕೊಂಡ ಅರಣ್ಯ ಇಲಾಖೆ ತಕರಾರು ತಂದು ಕೆಲಸ ಆರಂಭ ಆಗಲಿಲ್ಲ. ಬದಲಾಗಿ ಅಲ್ಲಾಪಟ್ಟಣ ಗ್ರಾಮದ ಸರ್ವೆ ನಂ. 59 ರಲ್ಲಿ 7.10 ಎಕರೆ ಸರ್ಕಾರಿ ಜಾಗವನ್ನು ಗುರುತಿಸಿ ಮಂಜೂರು ಮಾಡಿ ಕೆಪಿಟಿಸಿಎಲ್‌ಗೆ ಹಸ್ತಾಂತರಿಸಲಾಗಿದೆ. ಇನ್ನು ಮುಂದಾದರೂ ಮೈಮರೆಯದೇ ಕೆಲಸ ಆರಂಭಿಸಬೇಕು. ಹಾಲಿ 150 ಕೋಟಿ ರೂ.ಗೆ ಅಧಿಕ ಹಣ ಹೆಚ್ಚುವರಿಯಾಗಿದೆ ಎಂದರು.

ಕಳೆದ ವಾರ ಅಧಿಕಾರಿಗಳು ಜಮೀನಿನ ಸರ್ವೆ ಕಾರ್ಯಕ್ಕೆ ಹೋದಾಗ ಗ್ರಾಮದ ಕೆಲವರು ಅಡ್ಡಿ ಪಡಿಸಿದರೆನ್ನಲಾಗಿದೆ. ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಸರ್ವೆ ಕಾರ್ಯ ನಡೆಸಿ ಜಾಗದ ಗಡಿಗುರುತಿಸಿ ಕೊಡುವಂತೆ ಸೂಚಿಸಿರುವುದಾಗಿ ಹೇಳಿದರು.

ತಾಲ್ಲೂಕಿನಲ್ಲಿ 66 ಕೆವಿ ವಿದ್ಯುತ್ ಸರಬರಾಜು ಕೇಂದ್ರಗಳ ಬಳಿ 5 ಕೆವಿ ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು ಜಾಗ ಗುರುತಿಸುವ ಪ್ರಕ್ರಿಯೆ ನಡೆದಿದೆ. ಎಲ್ಲ ಹೋಬಳಿಗಳಲ್ಲೂ ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಅಗತ್ಯವಿರುವ ಜಾಗ ಗುರುತಿಸುವಂತೆ ತಹಸೀಲ್ದಾರ್ ಅವರಿಗೆ ಸೂಚಿಸಲಾಗಿದೆ ಎಂದರು.

ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ನಾಲೆಗಳನ್ನು ಬಳಸಿಕೊಳ್ಳಬೇಕು. ನಾಲೆಗಳ ಮೇಲ್ಭಾಗದಲ್ಲಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸುವುದರಿಂದ ವಿದ್ಯುತ್ ಉತ್ಪಾದನೆಯ ಜತೆಗೆ ನಾಲೆಯ ನೀರು ಆವಿಯಾಗುವುದು ತಪ್ಪುತ್ತದೆ. ವಿದೇಶಗಳಲ್ಲಿ ಈ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ಈ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಕಾರ್ಯರೂಪಕ್ಕೆ ತರಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಹಶೀಲ್ದಾರ್ ಕೆ.ಸಿ. ಸೌಮ್ಯ, ಗ್ರೇಡ್-2 ತಹಶೀಲ್ದಾರ್ ಸಿ. ಸ್ವಾಮಿ, ಸೆಸ್ಕ್ ಚಿದಂಬರ್, ಕಿರಣ್, ಖುಷ್ವಂತ್, ಸೋಮಶೇಖರ್, ಪಿಎಸ್‌ಐ ಸಿ.ಆರ್. ಕಾವ್ಯ ಉಪಸ್ಥಿತರಿದ್ದರು.

# ಆರು ತಿಂಗಳಲ್ಲಿ ಅಂಬೇಡ್ಕರ್ ಭವನ ಕಾಮಗಾರಿ ಮುಕ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದ ಹೃದಯ ಭಾಗದಲ್ಲಿನ ಅಂಬೇಡ್ಕರ್ ಭವನದ ಮುಂದುವರಿದ ಕಾಮಗಾರಿಗೆ 1.50 ಕೋಟಿ ರೂ. ಬಿಡುಗಡೆಯಾಗಿದ್ದು, ಮುಂದಿನ 6 ತಿಂಗಳೊಳಗೆ ಬಾಕಿ ಕೆಲಸ ಪೂರ್ಣಗೊಳಿಸಲಾಗುವುದು ಎಂದು ಶಾಸಕ ಎ. ಮಂಜು ತಿಳಿಸಿದರು.



ಅಧಿಕಾರಿಗಳೊಂದಿಗೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಕಳೆದ 8 ವರ್ಷಗಳಿಂದ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿತ್ತು. ಬಾಕಿ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಕಳೆದ ವಿಧಾನಸಭಾ ಅಧಿವೇಶನದಲ್ಲಿ ಸಮಾಜ ಕಲ್ಯಾಣ ಸಚಿವ ಮಹಾದೇವಪ್ಪ ಅವರ ಗಮನ ಸೆಳೆಯಲಾಗಿತ್ತು. ಕೂಡಲೇ ಸಚಿವರು 1.50 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿ ಬಾಕಿ ಕಾಮಗಾರಿ ಪೂರ್ಣಗೊಳಿಸಲು ನೆರವಾಗಿದ್ದಾರೆ.

ಈ ಹಿಂದೆ ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ವೇಳೆ 3.50 ಕೋಟಿ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದೆ. ಆರಂಭಿಕವಾಗಿ 1.50 ಕೋಟಿ ರೂ. ಹಣ ಬಿಡುಗಡೆಯಾಗಿತ್ತು. ಈಗ ನಾನೇ ಶಾಸಕನಾಗಿರುವ ಅವಧಿಯಲ್ಲಿ ಭವನದ ಕಾಮಗಾರಿ ಪೂರ್ಣಗೊಳಿಸುವ ಅವಕಾಶ ಸಿಕ್ಕಿದೆ. ಇನ್ನೂ ಯಾವುದೇ ಕಾರಣಕ್ಕೂ ಭವನದ ಕೆಲಸ ನನೆಗುದಿಗೆ ಬೀಳುವುದಿಲ್ಲ. ಬಿಡುಗಡೆಯಾಗಿರುವ ಹಣದಲ್ಲಿ ಕೆಲಸ ಪೂರ್ಣಗೊಳ್ಳದಿದ್ದರೇ ಮತ್ತೆ ಅನುದಾನ ತಂದು ಸಂಪೂರ್ಣವಾಗಿ ಕೆಲಸ ಪೂರ್ಣಗೊಳಿಸಿ ಉದ್ಘಾಟಿಸಲಾಗುವುದು ಎಂದು ಭರವಸೆ ನೀಡಿದರು.

2017ರ ಡಿ. 11ರಂದು ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನ ಕಾರ್ಯಕ್ರಮದಲ್ಲಿ ಭವನದ ಕಾಮಗಾರಿ ಆರಂಭಕ್ಕೆ ಚಾಲನೆ ನೀಡಲಾಗಿತ್ತು. 2018ರಲ್ಲಿ ನೂತನ ಭವನ ಲೋಕಾರ್ಪಣೆಗೊಳಿಸುವ ಸದುದ್ದೇಶವನ್ನು ಸಹ ಹೊಂದಲಾಗಿತ್ತು. ಬದಲಾದ ರಾಜಕೀಯ ವ್ಯವಸ್ಥೆಯಿಂದ ಭವನದ ಕಾಮಗಾರಿ ನನೆಗುದಿಗೆ ಬಿದ್ದಿತ್ತು. ಇನ್ನೂ ಮುಂದೆ ಹೀಗಾಗಲು ಬಿಡುವುದಿಲ್ಲ ಎಂದರು.

ಈ ಹಿಂದೆ ನಿರ್ಧರಿಸಿದಂತೆ ಭವನದ ಕಾಮಗಾರಿ ಪೂರ್ಣಗೊಳ್ಳಬೇಕು. ಈಗಾಗಲೇ 1.50 ಕೋಟಿ ರೂ. ವೆಚ್ಚದ ಕೆಲಸ ಕೈಗೊಳ್ಳಲಾಗಿದೆ. ಉಳಿದ ಕಾಮಗಾರಿ ನಿಗದಿತ ಅವಧಿ ಮತ್ತು ಮೂಲ ಪ್ಲಾನ್ ನಂತೆ ನಡೆಯಬೇಕು. ಈ ಸಲುವಾಗಿ ಬಾಕಿ ಕಾಮಗಾರಿ ಕುರಿತು ತ್ರಿಡಿ, ನೀಲ ನಕ್ಷೆಯನ್ನು ಸಿದ್ದಪಡಿಸಿ ಸಲ್ಲಿಕೆಯಾದ ಬಳಿಕವೇ ಕೆಲಸವನ್ನು ಮುಂದುವರಿಸಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿ, ಎಂಜಿನಿಯರ್ ಈ ಬಗ್ಗೆ ಕಾರ್ಯೋನ್ಮುಖರಾಗಬೇಕೆಂದು ಅವರು ಸೂಚನೆ ನೀಡಿದರು.

ಭವನದ ಕೆಲಸ ಆರಂಭಕ್ಕೂ ಮುನ್ನ ಸುತ್ತಲಿನ ಖಾಲಿ ಜಾಗದಲ್ಲಿನ ತ್ಯಾಜ್ಯವನ್ನು ಸ್ವಚ್ಛಗೊಳಿಸಬೇಕು. ಆ ವರಣದಲ್ಲಿ ವಿದ್ಯುತ್ ಲೈನ್ ಇದ್ದು, ಇದನ್ನು ಸಹ ತೆರವುಗೊಳಿಸಬೇಕು. ಅಲ್ಲದೆ ಬಿಎಸ್‌ಎಲ್‌ಎನ್ ಕ್ವಾಟ್ರಸ್‌ನವರು ಭವನದ ಜಾಗದಲ್ಲಿ ತಿರುಗುವ ಬದಲು ಅವರಿಗೆ ಬಿಟ್ಟಿರುವ ಜಾಗದಲ್ಲಿ ಓಡಾಡುವಂತೆ ತಿಳುವಳಿಕೆ ನೀಡಬೇಕೆಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗೆ ಅವರು ತಿಳಿಸಿದರು.

ತಹಶೀಲ್ದಾರ್ ಸೌಮ್ಯ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರವಿಕುಮಾರ್, ಜಿಪಂ ಎಂಜಿನಿಯರ್, ಸಮಾಜದ ಮುಖಂಡರು ಇದ್ದರು.

# ಗೊಂದಲದ ಗೂಡಾದ ಡೇರಿ ನಿರ್ಮಾಣ ಕಟ್ಟಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಕಲಗೂಡು ತಾಲ್ಲೂಕು ಶಣವಿನಕುಪ್ಪೆ ಗ್ರಾಮದಲ್ಲಿ ಹಾಲಿನ ಡೇರಿ ನಿರ್ಮಾಣ ಸಂಬಂಧ ಒಂದೇ ಗ್ರಾಮದ ಎರಡು ಗುಂಪುಗಳ ನಡುವೆ ಪರ-ವಿರೋಧ ನಿಲುವು ಮುಂದುವರೆದಿದ್ದು ಗೊಂದಲದ ಗೂಡಾಗಿದೆ.




ಬುಧವಾರ ಪ್ರತ್ಯೇಕ ಸುದ್ದಿಗೋಷ್ಟಿ ನಡೆಸಿದ ಗ್ರಾಮಸ್ಥರು ತಮ್ಮ ವಾದ ಮಂಡಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಸಂತೋಷ್ ಮಾತನಾಡಿ, ಸದರಿ ಜಾಗ ನಮ್ಮೂರಿನಲ್ಲಿರುವ ಈಶ್ವರ ಮತ್ತು ಆಂಜನೇಯ ಸ್ವಾಮಿ ದೇವಾಲಯಗಳ ಕಾರ್ಯಕ್ರಮ ಅಥವಾ ಜಾತ್ರೆ ಮಾಡಲು ಇರುವುದು 30★108 ಅಳತೆಯ ಅದೊಂದೇ ಗ್ರಾಮಠಾಣ ಜಾಗ. ಆದರೆ ಅದನ್ನು ಪಿಡಿಓ ಅವರು ಏಕಪಕ್ಷೀಯವಾಗಿ ಡೇರಿಗೆ ಇ-ಖಾತೆ ಮಾಡಿಕೊಟ್ಟಿದ್ದಾರೆ ಎಂದು ದೂರಿದರು. ಗ್ರಾಮಸ್ಥರ ಮನವಿಗೂ ಪುರಸ್ಕಾರ ಕೊಟ್ಟಿಲ್ಲ. ಬೇರೆ ಕಡೆಯಲ್ಲೂ ಡೇರಿ ಮಾಡಬಹುದು. ಆದರೆ ಯಾರದೋ ಕುಮ್ಮಕ್ಕಿನಿಂದ ವಿರೋಧವನ್ನು ಲೆಕ್ಕಿಸದೇ ಡೇರಿ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಅವ್ಯವಸ್ಥೆ, ಅಶುಚಿತ್ವ ಉಂಟಾದರೆ ಇದಕ್ಕೆ ಯಾರು ಕಾರಣ ಎಂದು ಪ್ರಶ್ನಿಸಿದರು. ಇದರ ವಿರುದ್ಧ ನಾವು ಕಾನೂನು ಹೋರಾಟ ಮಾಡುತ್ತೇವೆ. ಗ್ರಾಮಸ್ಥರು ಹಾಗೂ ಗ್ರಾಪಂ ಸದಸ್ಯರ ವಿರೋಧದ ನಡುವೆಯೂ ಪಿಡಿಓ ಹಾಗೂ ಬಿಲ್ ಕಲೆಕ್ಟರ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಅವರ ವಿರುದ್ಧ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಟಿಯಲ್ಲಿ ಅಪ್ಪಣ್ಣ, ಸ್ವಾಮಿಗೌಡ ಇದ್ದರು. ನಂತರ ಮಾತನಾಡಿದ ಡೇರಿ ಕಾರ್ಯದರ್ಶಿ ಪ್ರಶಾಂತ್, ಸಂತೋಷ್ ಮಾಡಿರುವ ಆರೋಪ ಶುದ್ಧ ಸುಳ್ಳು ಎಂದರು. ಸದರಿ ಜಾಗದಲ್ಲಿ ಡೇರಿ ಕಟ್ಟಡ ಕಟ್ಟಿದರೆ ತಮ್ಮ ಮನೆ ಮರೆಯಾಗಲಿದೆ ಮತ್ತು ಆ ಜಾಗವನ್ನು ತಮ್ಮಂತೆ ಮಾಡಿಕೊಳ್ಳಲು ಸುಳ್ಳು ಹೇಳುತ್ತಿದ್ದಾರೆ. ಜಾತಿ ಸಂಘರ್ಷ ಎಂದು ಬಿಂಬಿಸಲು ಹೊರಟಿದ್ದಾರೆ. ನಾವು ಕಾನೂನು ಪ್ರಕಾರವೇ ನೂತನ ಡೇರಿ ನಿರ್ಮಾಣ ಮಾಡಲು ಹೊರಟಿದ್ದೇವೆ ಎಂದರು. ಚನ್ನಪ್ಪಾಜಿ, ಕುಮಾರ್, ಪುಟ್ಟಪ್ಪ ಇದ್ದರು.

# ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು: ಶಿವಕುಮಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೆಣ್ಣು ಮಕ್ಕಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ಹಂತದಲ್ಲಿ ಓದಲು ತೋರುವ ಬದ್ಧತೆಯನ್ನು ಉನ್ನತ ಶಿಕ್ಷಣದ ಹಂತದಲ್ಲಿ ತೋರುವುದಿಲ್ಲ ಹಾಗಾಗಿ ಅವರು ಉನ್ನತ ಹುದ್ದೆಗಳನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ ಎಂದು ಬೆಂಗಳೂರಿನ ಅಕ್ಕ ಐ.ಎ.ಎಸ್. ಅಕಾಡೆಮಿಯ ನಿರ್ದೇಶಕ ಡಾ. ಶಿವಕುಮಾರ ಅಭಿಪ್ರಾಯಪಟ್ಟರು.



ನಗರದ ಆರ್.ಸಿ. ರಸ್ತೆಯ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ 2024-25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ವೇದಿಕೆ, ರೆಡ್ ಕ್ರಾಸ್, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಎಸ್‌ಎಸ್ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಾಮಾನ್ಯವಾಗಿ ಯುವಕರಿಗೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ಹಂತದಲ್ಲಿ ಇರುವ ಓದುವ ಬದ್ಧತೆ ಆ ಬಳಿಕ ಇರುವುದಿಲ್ಲ. ಹಾಗಾಗಿ ದೇಶದ ಅತೀ ದೊಡ್ಡ ಹುದ್ದೆಗಳಲ್ಲಿ ಹೆಣ್ಣು ಮಕ್ಕಳು ಇಲ್ಲದಂತಾಗಿದ್ದು, ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಾಧೀಶರು ಮತು ವಕೀಲರು ಇದ್ದರೆ ಮಾತ್ರ ಹೆಣ್ಣು ಮಕ್ಕಳ ಪರ ನ್ಯಾಯ ದೊರಕಿಸಲು ಸಾಧ್ಯ. ಆದರೆ ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಮಾಡದೆ ಇರುವುದರಿಂದ ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಉನ್ನತ ಶಿಕ್ಷಣದ ಹಂತದಲ್ಲಿ ಬದ್ಧತೆಯಿಂದ ಹೆಣ್ಣು ಮಕ್ಕಳು ಓದಬೇಕು. ದೊಡ್ಡ ಹುದ್ದೆಯಲ್ಲಿರುವ ಮಹಿಳಾ ಅಧಿಕಾರಿಗಳನ್ನು ಕಾಲೇಜಿಗೆ ಕರೆಸಿ ಹೆಣ್ಣು ಮಕ್ಕಳಿಗೆ ಪ್ರೇರಣೆ ನೀಡಬೇಕು. ಸಾಧನೆಗೆ ಹೆಣ್ಣು ಮಕ್ಕಳು, ಗಂಡು ಮಕ್ಕಳು ಎಂಬ ಭೇದ ಭಾವ ಇಲ್ಲ, ಚೈತನ್ಯ, ಶಕ್ತಿ, ಇದ್ದರೆ ಯಾರು ಬೇಕಾದರೂ ಸಾಧನೆ ಮಾಡಬಹುದು. ಯಾವುದೇ ಮನುಷ್ಯನಿಗೆ ಜೀವಿತಾವಧಿಯ 18 ರಿಂದ 25ನೇ ವಯಸ್ಸಿನಲ್ಲಿ ಓದುವಿಕೆಗೆ ಶಕ್ತಿ ಇರುತ್ತದೆ. ಹಾಗಾಗಿ ಈ ವಯಸ್ಸಿನಲ್ಲಿ ಸಮಯ ವ್ಯರ್ಥ ಮಾಡದೆ ಗುರಿ ಸಾಧನೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಓದಬೇಕು. ಸಮಯ ಎಂಬ ಸಂಪತ್ತನ್ನು ಇಂದು ಯುವಕರು ವ್ಯರ್ಥ ಮಾಡುತ್ತಿದ್ದಾರೆ. ಈ ಸಮಯವನ್ನು ಈ ರೀತಿ ಬೇಡವಾದ ವಿಚಾರಗಳಿಗೆ ವ್ಯರ್ಥ ಮಾಡಬಾರದು. ಇದರಿಂದ ಪದವಿ ಮುಗಿಸಿದ ಯುವಕರು ಸರಿಯಾಗಿ ಶಿಕ್ಷಣ ಪಡೆದುಕೊಳ್ಳದೆ ಪರದಾಡುತ್ತಿದ್ದಾರೆ. ಸಮಯವನ್ನು ಕಳೆದುಕೊಂಡ ಮೇಲೆ ಮತ್ತೆ ಪಡೆಯಲು ಸಾಧ್ಯವಿಲ್ಲ, ಪದವಿ ಮುಗಿಸಿದ ಮೇಲೆ ಉದ್ಯೋಗ ಪಡೆಯುವುದು ಗಗನ ಕುಸುಮವಾಗಿದೆ. ಒಂದು ದಿನದಲ್ಲಿ ಕನಿಷ್ಠ 6 ಗಂಟೆಯಾದರೂ ಓದಬೇಕು, ಆದರೇ ಸಾಮಾನ್ಯವಾಗಿ ಹೆಚ್ಚು ಯುವಕರು ಓದುತ್ತಿಲ್ಲ. ಜೀವನ ಎಂದ್ರೆ ಏನು ಎಂಬುವುದಕ್ಕೆ ನಾನಾ ಅರ್ಥವನ್ನು ನಮ್ಮ ಹಿರಿಯರು ಕೊಟ್ಟಿದ್ದಾರೆ. ಸಮಯವನ್ನು ಸರಿಯಾಗಿ ಬಳಕೆ ಮಾಡಿಕೊಳ್ಳುವುದೆ ಜೀವನ. ಆದ್ದರಿಂದ ಸಮಯವನ್ನು ಬಳಕೆ ಮಾಡಿಕೊಂಡು ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಓದುವ ಸಮಯದಲ್ಲಿ ಇತರೆ ವಿಷಯದ ಬಗ್ಗೆ ಗಮನ ಹರಿಸಬಾರದು. ಪಠ್ಯದ ಜೊತೆಗೆ ಸಮಾಜದ ಇನ್ನಿತರ ವಿಚಾರಗಳನ್ನು ತಿಳಿದುಕೊಳ್ಳಬೇಕು. ಆಧುನಿಕ ಜಗತ್ತಿನಲ್ಲಿ ಸ್ಪರ್ಧೆ ಎಂಬುವುದು ಹೆಚ್ಚಾಗುತ್ತಿದ್ದು ಮುಂದಿನ ದಿನಗಳಲ್ಲಿ ಯುವಕರಿಗೆ ಸಾಧನೆ ಮಾಡುವುದು ಸವಾಲಿನ ಕೆಲಸವಾಗಿದೆ. ಹೆಣ್ಣುಮಕ್ಕಳು ಶಿಕ್ಷಣದಲ್ಲಿ ಕ್ರಾಂತಿ ಮಾಡುವ ಹಾದಿಯಲ್ಲಿ ಸಾಗಬೇಕು. ಮಹನೀಯರು ಹೇಳಿರುವ ಆದರ್ಶಗಳನ್ನು ಪಾಲನೆ ಮಾಡುವ ಮೂಲಕ ಜೀವನದಲ್ಲಿ ಸಾಧನೆ ಮಾಡಬೇಕು. ಪಠ್ಯದೊಂದಿಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು.

ಜೀ ಅಚೀವರ್ಸ್ 2024-25ನೇ ಸಾಲಿನ ಪ್ರಶಸ್ತಿ ವಿಜೇತ ಯು.ಜೆ. ಮಲ್ಲಿಕಾರ್ಜುನ್, ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯ ಶಂಕರ್, ಸಾಂಸ್ಕೃತಿಕ ವೇದಿಕೆ ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ಸ್ಕೌಟ್ಸ್ ಅಂಡ್ ಗೌಡ್ಸ್ ಸಂಚಾಲಕಿ ಎಂ.ವಿ. ಹೇಮಾವತಿ, ರೆಡ್ ಕ್ರಾಸ್ ಸಂಚಾಲಕ ಡಾ.ಸಿ.ಎಲ್. ಶಿವಕುಮಾರ್, ಎನ್‌ಎಸ್‌ಎನ್ ಕಾರ್ಯಕ್ರಮ ಅಧಿಕಾರಿ ಜಿ.ಎಸ್. ರೇಖಾ, ಕ್ರೀಡಾ ಕಾರ್ಯದರ್ಶಿ ಡಾ. ಜಿ. ಸುನೀತ ಹಾಗೂ ಇತರರು ಹಾಜರಿದ್ದರು.

# ನಂಬಿ ಕೆಟ್ಟವರಿಲ್ಲ ನಂಬಿಕೆಯೇ ಬೆಳಕು

**ಕೆ.ಎನ್. ಚಿದಾನಂದ ಹಾಸನ**

ನಂಬಿಕೆ ಬಹಳ ದೊಡ್ಡ ವಿಚಾರ. ನಾವು ಯಾರನ್ನೂ ಸುಮ್ಮ ಸುಮ್ಮನೆ ನಂಬುವುದಿಲ್ಲ. ನಮ್ಮ ಮುಂದೆ ನಿಂತು ಮಾತನಾಡುವವರ ಮಾತು, ಕೃತಿ, ನಡತೆ ಇವೆಲ್ಲವನ್ನು ಅವಲೋಕನ ಮಾಡುತ್ತೇವೆ. ಒಮ್ಮೊಮ್ಮೆ ಏಕಾಏಕಿ ನಂಬಿ ಮೋಸ ಹೋಗುವುದು ಉಂಟು. ಹಾಗೆಂದ ಮಾತ್ರಕ್ಕೆ ಯಾವಾಗಲೂ ಮೋಸ ಹೋಗುತ್ತೇವೆ ಎಂದಲ್ಲ. ನಂಬಿಕೆಯಲ್ಲಿ ಸ್ವಲ್ಪ ಎಚ್ಚರಿಕೆಯೂ ಇರಬೇಕಾಗುತ್ತದೆ. ಹಾಗೆಂದು ಯಾರನ್ನೂ ನಂಬುವುದಿಲ್ಲ ಎಂದು ಹೇಳಲಾಗುವುದಿಲ್ಲ. ಏಕೆಂದರೆ ನಮ್ಮ ಬದುಕು-ಬವಣೆ, ಬಾಳು ಗೋಳು, ಸುಖ-ದುಃಖ, ಹಿನ್ನೆಡೆ-ಮುನ್ನಡೆ, ಸೋಲು-ಗೆಲುವು ಎಲ್ಲವೂ ನಂಬಿಕೆಯ ಮೇಲೆ ನಿಂತಿರುತ್ತವೆ.



ಚಿಂಟು ಮತ್ತು ಮಿಂಟು ಎಂಬ ಇಬ್ಬರು ಹುಡುಗರು ಎಂಟನೇ ತರಗತಿಯಲ್ಲಿ ಓದುತ್ತಿದ್ದರು.

ಚಿಂಟುವಿಗೆ ಗುರುಗಳ ಪಾಠದಲ್ಲಿ ಮತ್ತು ಅವರ ಮಾತಿನ ಮೇಲೆ ಬಹಳ ನಂಬಿಕೆ ಇತ್ತು. ಆದರೆ ಮಿಂಟು ಸ್ವಲ್ಪ ವಿಭಿನ್ನ. ಅವನಿಗೆ ಯಾರ ಮೇಲೂ ನಂಬಿಕೆಯಿರುತ್ತಿರಲಿಲ್ಲ. ಅನುಮಾನದ ಪ್ರಾಣಿ. ಗುರುಗಳ ಪಾಠದಿಂದ ಹಿಡಿದು, ಸ್ನೇಹಿತರ ಮಾತುಗಳು, ಸಹೋದರನ ನಡವಳಿಕೆ, ಯಾವುದನ್ನು ನಂಬುತ್ತಿರಲಿಲ್ಲ. ಎಲ್ಲವನ್ನು ಅನುಮಾನದಿಂದಲೇ ನೋಡುತ್ತಿದ್ದ ಮತ್ತು ಹಾಗೆಯೇ ಯೋಚಿಸುತ್ತಿದ್ದ. ಇಂಥ ಅನುಮಾನಗಳಿಂದ ಮಿಂಟು ಅನೇಕ ಸಲ ಅವಮಾನಗಳನ್ನು ಎದುರಿಸಿದ್ದಾನೆ. ಗುರುಗಳಿಂದ ಶಿಕ್ಷೆಯನ್ನೂ ಅನುಭವಿಸಿದ್ದಾನೆ. ಹೀಗೆಯೇ ಅವರಿಬ್ಬರ ವ್ಯಾಸಂಗದ ಬದುಕು ಸಾಗುತ್ತಿತ್ತು. ಎಂಟನೇ ತರಗತಿಯ ವಾರ್ಷಿಕ ಪರೀಕ್ಷೆಗಾಗಿ ವಿದ್ಯಾರ್ಥಿಗಳ ಸಿದ್ಧತೆ ನಡೆದಿತ್ತು. ಚಿಂಟು ನಂಬಿಕೆಯಿಂದ ಓದಿದನು. ಮಿಂಟುವಿಗೆ ಪಠ್ಯ ಪುಸ್ತಕದ ಮೇಲಾಗಲಿ, ಗುರುಗಳ ಮೇಲಾಗಲಿ, ತನ್ನ ಓದಿನಲ್ಲಾಗಲಿ ಒಂದು ಸ್ವಲ್ಪವೂ ನಂಬಿಕೆಯಿರಲಿಲ್ಲ. ಚಿಂಟುವಿಗೆ ತಾನು ಮಾಡುವ ಕೆಲಸದಲ್ಲಿ ಅಪಾರ ನಂಬಿಕೆ ಇತ್ತು ಮತ್ತು ಅದನ್ನು ಶ್ರದ್ಧೆ ಹಾಗೂ ನಿಷ್ಠೆಯಿಂದ ಮಾಡುತ್ತಿದ್ದನು. ಚಿಂಟು ಮತ್ತು ಮಿಂಟು ಇಬ್ಬರೂ ಎಂಟನೇ ತರಗತಿಯ ವಾರ್ಷಿಕ ಪರೀಕ್ಷೆಗೆ ಕುಳಿತರು. ಚಿಂಟು ತನ್ನ ಉತ್ತರಗಳನ್ನು ಪರೀಕ್ಷೆಯ ನಿರ್ದಿಷ್ಟ ಸಮಯದೊಳಗಾಗಿ ನಂಬಿಕೆಯಿಂದ ಬರೆದನು. ಆದರೆ ಮಿಂಟುವಿಗೆ ಉತ್ತರಗಳು ಗೊತ್ತಿದ್ದರೂ ಬರೆಯುವಾಗ ಸರಿಯೋ ತಪ್ಪೋ, ಸರಿಯೋ ತಪ್ಪೋ ಎಂಬ ಅನುಮಾನದ ಪೆಡಂಭೂತ ಕಾಡುತ್ತಲೇ ಇತ್ತು. ಹೀಗೆಯೇ ಯೋಚಿಸುತ್ತಾ, ಚಿಂತಿಸುತ್ತಾ ಕುಳಿತುಕೊಂಡ ಮಿಂಟು ಒಂದೇ ಒಂದು ಪ್ರಶ್ನೆಗೂ ಉತ್ತರ ಬರೆಯದೇ ಖಾಲಿ ಹಾಳೆಯನ್ನು ಕೊಡಬೇಕಾಯಿತು. ಅಂತಿಮವಾಗಿ ಎಂಟನೇ ತರಗತಿಯ ಫಲಿತಾಂಶ ಪ್ರಕಟವಾದಾಗ ನಂಬಿಕೆಯಿಂದ ಪರೀಕ್ಷೆ ಬರೆದ ಚಿಂಟು ಉತ್ತೀರ್ಣನಾಗಿದ್ದನು. ಚಿಂಟುವಿಗೆ ನಂಬಿಕೆಯೇ ಬೆಳಕಾಗಿತ್ತು. ಆದರೆ ಮಿಂಟು ಎಂಟನೇ ತರಗತಿಯಲ್ಲೇ ಡುಂಕಿ ಹೊಡೆದನು. ಈ ಕಥೆ ಚಿಂಟು ಮತ್ತು ಮಿಂಟು ಎಂಬ ಇಬ್ಬರು ಹುಡುಗರ ಕಥೆಯಾದರೂ, ಇಲ್ಲಿ ನಂಬಿಕೆ ಹೇಗೆ ನಮ್ಮನ್ನು ಮುನ್ನಡೆಸುತ್ತದೆ. ಹಾಗೆಯೇ ಅನುಮಾನಗಳು ಹೇಗೆ ವ್ಯಕ್ತಿಯ ಹಿಂಬೀಳುವಿಕೆಗೆ ಕಾರಣವಾಗುತ್ತವೆ ಎಂಬದನ್ನು ಕಟ್ಟಿ ಕೊಡುತ್ತವೆ. ನಂಬಿಕೆ ಧನಾತ್ಮಕತೆಯನ್ನು ತೋರಿಸಿದರೆ, ಅನುಮಾನವು ಋಣಾತ್ಮಕತೆಯನ್ನು ಬಿಂಬಿಸುತ್ತದೆ. ಆದ್ದರಿಂದ ನಂಬಿಕೆಯೇ ಬೆಳಕು. ನಂಬಿಕೆಟ್ಟವರಿಲ್ಲವೋ ಎಂಬ ಸಾಧು ಸಂತರ ನುಡಿಗಳು ನೆನಪಾಗುತ್ತವೆ.

# 4 ಪುಸ್ತಕ ಲೋಕಾರ್ಪಣೆ ಇಂದು

ಹಾಸನ: ನಗರದ ಎ.ವಿ. ಕಾಂತಮ್ಮ ಮಹಿಳಾ ಕಾಲೇಜಿನಲ್ಲಿ ಏ. 3ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಸಾಹಿತಿ ಆನಂದ್ ದೊಡ್ಡಮನೆ ಅವರ ನಾಲ್ಕು ಪುಸ್ತಕ ಬಿಡುಗಡೆ ಸಮಾರಂಭ ಹಾಗೂ ಸಂವಾದ ಹಮ್ಮಿಕೊಳ್ಳಲಾಗಿದೆ. ಆನೆ ನಡೆದದ್ದೇ ಹಾದಿ, ಮಿನುಗುತಾರೆ, ಚಿಕ್ಕಮಗಳೂರಿನಲ್ಲಿ ಬಂಗಾರದ ಮನುಷ್ಯ ಡಾ. ರಾಜ್, ಆನಂದ್ ಅವರ ಸಮಗ್ರ ಸಾಹಿತ್ಯ ಎಂಬ ನಾಲ್ಕು ಪುಸ್ತಕಗಳು ಲೋಕಾರ್ಪಣೆ ಆಗಲಿವೆ.

ಕಾಲೇಜು ಪ್ರಾಂಶುಪಾಲ ಡಾ. ಸೀ.ಚ. ಯತೀಶ್ವರ್ ಸಮಾರಂಭದ ಅಧ್ಯಕ್ಷತೆ ವಹಿಸುವರು. ಲೇಖಕರಾದ ಮಮತಾ ಪ್ರಭು, ಗೊರೂರು ಶಿವೇಶ್, ಮೇಟಿಕೆರೆ ಹಿರಿಯಣ್ಣ ಕೃತಿ ಪರಿಚಯ ಮಾಡಲಿದ್ದಾರೆ. ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ. ಎಸ್.ಆರ್. ಹೇಮಾವತಿ, ಪ್ರಾಣಿಶಾಸ್ತ್ರ ವಿಭಾಗ ಮುಖ್ಯಸ್ಥೆ ಪ್ರೊ. ಎಸ್.ಹೆಚ್. ವಾರಿಜ ಹಾಗು ಲೇಖಕ ದೊಡ್ಡಮನೆ ಆನಂದ್ ಪಾಲ್ಗೊಳ್ಳಲಿದ್ದಾರೆ.

# ನಾಳೆ ಮದ್ಯ ಮಾರಾಟಗಾರರ ಪ್ರತಿಭಟನೆ

ಆಲೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾ ಮದ್ಯ ಮಾರಾಟಗಾರರ ಸಂಘದಿಂದ ಏ. 4ರ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಅಬಕಾರಿ ಸನ್ನದುದಾರರು ಹಲವು ವರ್ಷಗಳಿಂದ ಸಮಸ್ಯೆ ಎದುರಿಸುತ್ತಿದ್ದಾರೆ. ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಯಾವ ಪ್ರಯೋಜನವಾಗಿಲ್ಲ. ಹೀಗಾಗಿ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ ಎಂದು ಸಂಘ ತಿಳಿಸಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248